4-6/13
9

Regd No. M 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟಿದು)

ಸಂಪುಟ 31 ಸಂಚಿಕೆ 33] ಗುರುವಾರ 6—11—47 [ಬಿಡಿ ಪ್ರತಿ 3 ಪೈ

ಹೈದರಾಬಾದ ರಾವಣರಾಜ್ಯ

ನವಖಾಲಿ ತಿಪ್ಪೇರಾ ತಾಂಡವನೃತ್ತ

ಸಂಭವಿಸಬಹುದು ?

ಮಹಿಶೂರು ಸರಕಾರದವರಿಗೆ

ಪೆನುಕೊಂಡ ಜನರ ವಿನಂತಿ

ಹೈದರಾಬಾದು ನಿಜಾಂರವರ ಪ್ರಾಳೆಯುಗಾರಿಕೆಗೆ ಕೊಡಲೀ ಏಟು ಹಾಕುವ ಸಲುವಾಗಿ ಹೈದರಾಬಾದು ಸಂಸ್ಥಾನ ಕಾಂಗ್ರೆಸ್ ಊರಿರುವ ಪ್ರಜಾರಣ ಕಹಳೆಯನ್ನು ಕಡಿದು ಹಾಕಲು ಮುಸ್ಲಿಮರು ಅತೀವ ಪ್ರಯತ್ನವನ್ನು ಮಾಡುತ್ತಿದ್ದಾರೆ.

ಹೈದರಾಬಾದು ಮುಸ್ಲಿಮರ ಸಹಾಯದ ಬಗೆಗೆ ಇತರ ದೇಶಗಳ ಮುಸ್ಲಿಮರು ಸಹಾಯ ಮಾಡುತ್ತಿದ್ದಾರೆ.

ಇತ್ತೆಹಾದುಲ್ ಮುಸ್ಲಿಮೀನ್ ಸಂಸ್ಥೆ ಇದೇ ತಾ || 18 ರಲ್ಲಿ ಹರತಾಳ ಆಚರಿಸುವುದೆಂದು ತಿಳಿಯಬಂದಿದೆ ನೇರ ಕಾರ್ಯಾಚರಣೆ, ಹರತಾಳ ಇತ್ಯಾದಿಗಳ ಬಗೆಗೆ ಕಳವಳಗೊಂಡಿರುವ ಹಿಂದುಗಳು ಹೈದರಾಬಾದು ತ್ಯಜಿಸುತ್ತಿರುವರೆಂದು ಹೇಳಲಾಗಿದೆ.

ಬಂಗಾಳದ ನವಖಾಲಿ, ತಿಪ್ಪೇರದಲ್ಲಿ ನಡೆದಂಥ ಭೀಕರ ಹತ್ಯಾಕಾಂಡ ಹೈದರಾಬಾದು ಹಿಂದೂಗಳ ಮೇಲೆ ನೇರಕಾರ್ಯಾಚರಣೆ ನಡೆದರೆ ಜರಗಬಹುದೆಂಬ ಭೀತಿ ಉತ್ಕಟವಾಗಿರುವುದೆಂದು ಹೇಳಲಾಗಿದೆ.

ಮೈಸೂರು ಸಂಸ್ಥಾನದ ಮುಸ್ಲಿಂ ಲೀಗಿನ ಪ್ರೋತ್ಸಾಹದ ಮೇಲೆ ಸಂಸ್ಥಾನದ ಮುಸ್ಲಿಮರು ಹೈದರಾಬಾದಿಗೆ ಹೋಗುತ್ತಿದ್ದಾರಂತೆ ?

ಪೆನುಕೊಂಡ ಮಹಾಜನರ ಪರವಾಗಿ ಮೈಸೂರು ಸರ್ಕಾರಕ್ಕೆ ಮನವಿಯೊಂದು ತಲುಪಿದೆ ಎಂದು ಗೊತ್ತಾಗಿದೆ ಸಂಸ್ಥಾನದ ಹೊರಗಿನವರಿಗೆ ಜೀಪ್ ಕಾರುಗಳನ್ನು ಬಾಡಿಗೆ ಮಾಡುವುದನ್ನು ನಿಲ್ಲಿಸಿ ಎಂದು ಪ್ರಾರ್ಥಿಸಲಾಗಿದೆ ಹೈದರಾಬಾದಿಗೆ ಈಗಾಗಲೇ 80 ಜೀಪನ್ನು ಮುಸ್ಲಿಮರು ಸಾಗಿಸಿರುವರೆಂದು ತಿಳಿಯಬಂದಿದೆ.

ಗೋವಧೆಯು ಶಾಸನದಿಂದ ನಿರ್ಬಂಧಿಸಲ್ಪಡಬಾರದು

ಎಂದು ಡೆಲ್ಲಿಯಲ್ಲಿ ಮೊನ್ನೆ ಪ್ರಾರ್ಥನಾ ಕಾಲದಲ್ಲಿ

ಗಾಂಧಿ ಮಹಾತ್ಮರು

ಹೇಳಿದರೆಂದು ಪ್ರಕಟವಾಗಿದೆ.

ಮಹಾ ಮುಷ್ಕರ !

ಮದ್ರಾಸ್ ಸರ್ಕಾರದ ಬಸ್ ಕೆಲಸಗಾರರು ತಮ್ಮ ಬೇಡಿಕೆಗಳ ಬಗ್ಗೆ ಡಿಸೆಂ 1 ರಲ್ಲಿ ಹರತಾಳ ಮಾಡಿ 21 ರಿಂದ ಮುಷ್ಕರ ಹೂಡುವರು

ಅಂಬೋತ್ಸವ

ಮೈಸೂರು ಅ 6— ಇದೇ ತಾ|| 10 ರಲ್ಲಿ ಮೈಸೂರು ಇಂಟರ್ ಕಾಲೇಜು ಸಂಘದ ಅಂಬೋತ್ಸವವನ್ನು ಶ್ರೀ ಕೆ. ಟಿ. ಭಾಷ್ಯಂರು ನೆರವೇರಿಸುವರು.

ಶ್ರೀಮನ್ಮಹಾರಾಜರ ವರ್ಧಂತ್ಯುತ್ಸವ ಫುಟ್‌ಬಾಲ್ ಪಂಥ

ಮೈಸೂರು ಅ 5— ಈ ದಿನ ಸಂಜೆ ಮೈಸೂರು ಬಾಯ್ಸ್ ಮತ್ತು ಎಸ್. ಕೆ. ಮಿಲ್ಸ್ ಕ್ಲಬ್ಬಿನವರಿಗೆ ನಡೆದ ಆಟದಲ್ಲಿ ಡ್ರಾ ಆಯಿತು. ಯಾವ ಕಡೆಯವರೂ ಗೋಲುಗಳನ್ನು ಹೊಡೆಯಲಿಲ್ಲ.

ಪಾತಾಸಿರೋಧ

ಕಲ್ಕತ್ತಾ— ಪಶ್ಚಿಮ ಬಂಗಾಳದಲ್ಲಿ ಪಾತಾಸಿರೋಧ ಜಾರಿಗೆ ತಂದು ಅಂಕುರ್ಪಣವಾಗಿ ಪ್ರತಿ ಶನಿವಾರಂ ಪೂ ಆ ಪ್ರಾಂತ್ಯದ 2000 ಕ್ಕೆ ಮೇಲ್ಪಟ್ಟ ರುವ ಹೆಂಡ ಸಾರಾಯಿ ಅಂಗಡಿಗಳು ಮುಚ್ಚಲ್ಪಡುತ್ತವೆ.

ಒಕಳ ಹಿಂದಿನ ಕಾಲದ್ದು

ಪ್ಯಾರಿಸ್ — 150 ಸಾವಿರ ವರ್ಷಗಳ ಹಿಂದಿನ ಮನುಷ್ಯನ ದೇಹಶೇಷ ಸಿಕ್ಕಿರುತ್ತದೆ

Latest

ಭಾರತ ಸಮಾತಾವಾದಿ ನಾಯಕ ಶ್ರೀ ಅಚ್ಯುತ ಪಟ್ಟವರ್ಧನ್ ರು ಇದೇ ತಾ || 11 ರಲ್ಲಿ ಮೈಸೂರಿಗೆ ಆಗಮಿಸುವರೆಂದು ತಿಳಿಯಬಂದಿದೆ.

ಬೆಂಗಳೂರು ನಗರ ಕಾಂಗ್ರೆಸ್ಸು ಭವನ ನಿಧಿಗೆ ರೂ. 25867 ಸೇರುವದಾಗಿ ತಿಳಿಯಬಂದಿದೆ.

ಹೈದ್ರಾಬಾದಿನಲ್ಲಿ 'ಪಂಜಾಬ್' ಮೇಲ ಚಿತ್ರ ಪ್ರದರ್ಶಿಸಲ್ಪಡಬೇಕಾಗಿತ್ತು. ಆ ಚಿತ್ರದಲ್ಲಿರುವ ಮಹಾತ್ಮಾ ಗಾಂಧಿ ಭಾವಚಿತ್ರಕ್ಕೆ ಪುಷ್ಪಾಹಾರ ಅರ್ಪಿಸುವ ದೃಶ್ಯ ಬಿಟ್ಟು ಚಿತ್ರ ಪ್ರದರ್ಶಿಸಬೇಕೆಂದು ನೈಜಾಂ ಸರಕಾರದ ಆಜ್ಞೆ.

ಲಾಹೋರು ನ 4—ಪಾಕಿಸ್ತಾನದ ಮೇಲೆ ಹಾರಿಹೋಗುವ ವಿಮಾನಗಳು ಅಧಿಕೃತ ಅನುಮತಿ ಪಡೆಯ ಬೇಕೆಂದು ಅಲ್ಲಿ ಗೌ || ಜ || ಹುಕುಂ

ಶ್ರೀನಗರ ನ 4— ಬಿನ್ನರ ಮಾಜಿ ಕಾರ್ಯದರ್ಶಿ ಕರ್ಫ್ಯೂ ಆಜ್ಞೆ ಉಲ್ಲಂಘಿಸಿದ್ದಕ್ಕೆ ರೂ 400 ಜುಲ್ಮಾನೆ ಕೊಟ್ಟರು. ಇವರು ಅಲ್ಲಿಗೆ ಹೋಗಿದ್ದು ಅಲ್ಲಿ ಗಲಭೆ ಹಬ್ಬಿಸಲು ಎಂದು ಹೇಳಲಾಗಿದೆ.

ಬೆಂಗಳೂರು ಸಿಟಿ ರೈಲ್ವೇ ಸ್ಟೇಟನ್ನಿನ ಎದುರು ಚೌಕಕ್ಕೆ ಭಾರತಮಾತಾ ಸರ್ಕಲ್ ಎಂದು ಹೆಸರಿಡಲಾಗಿದೆ.

ಪ್ರಸಿದ್ಧ ಹಾಸ್ಯಗಾರ ಚಾರ್ಲಿ ಸಿನಿಮಾ ಹವ್ಯಾಸಬಿಟ್ಟು ಜನಘಡ ನವಾಬರ ಕಾರ್ಯದರ್ಶಿಯಾಗುವನಂತೆ.

ಅಗ್ರಾದ ಹತ್ತಿರವಿರುವ ರಸಲುಪುರದ 20 ಜನ ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗಲು ರೈಲ್ವೇ ಸ್ಟೇಷನ್ನಿನಲ್ಲಿ ಪಾಕಿಸ್ತಾನ ಸ್ಪೆಷಲ್ ಗಾಡಿ ದಾರಿ ನೋಡುತ್ತಾ ಕೂತದ್ದರು. ಆದರೆ ಅದೇ ಊರಿನ ಹಿಂದೂಗಳೆಲ್ಲಾ ಅವರಲ್ಲಿಗೆ ಹೋಗಿ, ತಿರುಗಿ ಬರಲು ಅವರ ಮನವೊಲಿಸಿದರು. ಎಲ್ಲರೂ ಮೆರವಣಿಗೆಯಿಂದ ಊರಿಗೆ ಹೋಗಿ, ಎಲ್ಲರೂ ಕೂಡಿ ಊಟ ಮಾಡಿದರು.

ರಾಜನೇ ಮಂತ್ರಿ

ಪಾಟಿಯಾಲ ನ 4 — ನಾಭಾ ಸಂಸ್ಥಾನದ ಪ್ರಧಾನಿ ಸರ್ದಾರ್ ಶಾಂತಿ ಸಿಂಗರು ತಮ್ಮ ಪದವಿಗೆ ರಾಜೀನಾಮೆ ಇತ್ತರು. ಮಹಾರಾಜರು ಮತ್ತೊಬ್ಬರನ್ನು ನೇಮಕ ಮಾಡದೆ ತಾವೇ ಪ್ರಧಾನಿಯಾದರು !

ಜೂಜು ನಿರೋಧ ಶಾಸನ

ಮದರಾಸು ಕುದುರೆ ಪಂದ್ಯವನ್ನು ರದ್ದು ಪಡಿಸುವ ಶಾಸನ ಶಾಸನ ಸಭೆಯ ಮುಂದೆ ಈ ಅಧಿವೇಶನದಲ್ಲಿ ಬರಲಿದೆ

ಪಾಕೀಸ್ತಾನ ಮಾಸಿತು

ರಾಜಕೋಟೆ, ನ 4 — ಜನಘಡದಲ್ಲಿ ಪಾಕೀಸ್ತಾನ ಮಾಸಿ ಹೋಗುತ್ತಿದೆ ಎಂದು ಪ್ರಧಾನಿ ಶಾವಲದಾಸರವರು ಪ್ರಚಂಡ ಸಭೆಯಲ್ಲಿ ತಿಳಿಸಿದರು.

ಅಧಿಕಾರ ಬಿಡುವುದು

ಲಂಡನ್, ನ 4 — ಪ್ಯಾಲಿಸ್ಟೈನ್ ಮೇಲಿನ ಅಧಿಕಾರವನ್ನು ಜನವರಿ ತಾ|| 1 ರಲ್ಲಿ ಬ್ರಿಟನ್ನು ತ್ಯಜಿಸಬಹುದೆಂದು ರಾಜಕೀಯ ವೃತ್ತಗಳಲ್ಲಿ ನಂಬಲಾಗಿದೆ

ಒಪ್ಪಂದ ಸಾಧ್ಯವಿದೆ

ಲಾಹೋರ್, ನ 4 — ಪಡಿನಾಡಿನ ಗವರ್ನರ್ ಕನ್ನಿಂಗ್‌ಹ್ಯಾಂರು ಜೀರ್ಣ ಪ್ರತಿನಿಧಿಗಿತ್ತ ಭೇಟಿಯಲ್ಲಿ ಕಾಶ್ಮೀರ ಸಮಸ್ಯೆ ಬಗ್ಗೆ ತೃಪ್ತಿಕರ ಒಪ್ಪಂದಕ್ಕೆ ಬರಲು ಸಾಧ್ಯವಿದೆಯೆಂದರು

ಅಖಿಲ ಭಾರತ ಮುಸ್ಲಿಂ ಲೀಗ್ ಸತ್ತು ಹೋಯಿತು

ಜ || ಜಿನ್ನಾರವರು ಅಧ್ಯಕ್ಷರಾಗಿರುವ ಮುಸ್ಲಿಂಲೀಗು ಭಾರತ ಮುಸ್ಲಿಂ ಲೀಗಿನವಂ ಮೇಲೆ ಹತೋಟಿ ಇಟ್ಟುಕೊಳ್ಳುವ ಹಾಗಿಲ್ಲ ಅಖಿಲ ಭಾರತ ಮುಸ್ಲಿಂ ಲೀಗು ಸತ್ತುಹೋಯಿತು — ಎಂದು ಸಂಯುಕ್ತ ಪ್ರಾಂತ್ಯ ಶಾಸನ ಸಭೆಯಲ್ಲಿ ಮುಸ್ಲಿಂ ಲೀಗಿನ ಉಪ ನಾಯಕ ಜ || ಅಲಿ ಘೋಷಿಸಿದರು

ಕಾಶ್ಮೀರ ಅಕ್ರಮಣ ಬಗೆಗೆ ಅವರು ಮುಂದವರಿಯುತ್ತಾ, ಹಳೆಯ ನಿಷ್ಕಂಕ-ಶ ಘನ ವ್ಯಕ್ತಿಗಳ ವಿಷಯದಲ್ಲಿ ಸಹಾನುಭೂತಿಯಿಲ್ಲ ಎಂದು ತಿಳಿಸಿದರು

ಪ್ರಜಾಪ್ರಭುತ್ವದ ಈ ಸಂದಿಗ್ಧಗಳಲ್ಲಿ ಹೈದರಾಬಾದ್ ನಿಜಾಂ ಮತ್ತು ಕಾಶ್ಮೀರ ರಾಜರು ಪರಿವರ್ತನಗೊಳ್ಳಬೇಕು ಎಂದವರು ಹೇಳಿದರು

ಭಾರತ ಮುಸ್ಲಿಂರು ಪಕ್ಷಾತೀತಕ್ಕೆ ನಿಷ್ಠೆಯುಳ್ಳವರಾಗಿರುವರೆಂದು ಅವರು ತಿಳಿಸಿದರು

ಂ ಂ

ಆಕ್ಕಿ ರೇಷನ್ ರದ್ದಾಗಬೇಕು

ಉತ್ತರ ಅಕಾಟ್ ಜಿಲ್ಲೆಯ ಶಾಸನ ಸಭೆಯ ಸದಸ್ಯರೊಬ್ಬರು ಆಕ್ಕಿ ರೇಷನ್ ರದ್ದಾಗಬೇಕೆಂಬ ನಿರ್ಣಯವನ್ನು ಮಂಡಿಸಿದ್ದಾರೆ

ಂ ಂ

ಯೂಸಾ ಅಸ್ತ್ರ ಮೊರಾರ್ಜಿ

ಒರ್ವ ಅಂಗಸಾಕ್ಷಿ ಕೊಲೆಪಾತಕ ಮಾಜಿಪ್ರಧಾನಿ ಯೂಸಾರವರ ಅಸ್ತ್ರವನ್ನು ಅತನ ರಕ್ಷಣೆಗಾಗಿ ಮೊರಾರ್ಜಿದಾನೆ

ಂ ಂ

ಅರಸನಿಗೆ ಅಂತ್ಯ ಎಚ್ಚರಿಕೆ

ಪುದುಕೋಟೆ ಮಹಾರಾಜರಿಗೆ ಅಲ್ಲಿಯ ಕಾಂಗ್ರೆಸ್ ಕಡೇ ಎಚ್ಚರಿಕೆ ಕೊಟ್ಟಿದ್ದು 15 ನೇ ತಾರೀಕಿನೊಳಗೆ ಜವಾಬ್ದಾರಿ ಸರ್ಕಾರ ಸ್ಥಾಪಿಸದಿದ್ದರೆ ಸತ್ಯಾಗ್ರಹ ಹೂಡುವುದಾಗಿ ತಿಳಿಸಿದ್ದಾರೆ

ಂ ಂ

ಧಾನ್ಯ ದೊರೆಯುತ್ತಿದೆ

ಮೈಸೂರು ಸುಬ್ರಾಯನ ಕೆರೆಯಲ್ಲಿ ಅನ್ನ ಸಮಸ್ಯೆ ಒಗ್ಗೆ ಮೊನ್ನೆ ನಡೆದ ಸಭೆಯಿಂದ ಅನೇಕ ದಾನಶ್ಯಾನುಗಾರರು ಸರ್ಕಾರಕ್ಕೆ ಜಂಬಲ ಕೊಡುವ ಸಲುವಾಗಿ ಧಾನ್ಯಗಳನ್ನು ಕೊಡುತ್ತಿದ್ದಾರೆ

ಂ ಂ

ಸ್ತುತ್ಯ ಕಾರ್ಯ

ಮೈಸೂರು ಸುಸ್ಥಾನದಲ್ಲಿ ನ್ಯೂಸ್ ಪ್ರಿಂಟ್ ಆಜ್ಞೆ ರದ್ದು ಮಾಡಿ ಶ್ರೀ ರೆಡ್ಡಿಯವರ ಸರ್ಕಾರ ಅಭಿನಂದನಾರ್ಹವಾಗಿದೆ

Woodlands

From 31–10–47

ಅಶೋಕಕುಮಾರ್

ವೀರಾ, ಹ್ಯಾರೊ, ಪಾತ್ರವಹಿಸಿರುವ

ಪಿಕಾರಿ

(ಅವೋಘ ಹಿಂದಿ ಚಿತ್ರ)

ಪ್ರತಿ ದಿನ 3 ಆಟಗಳು

At Opera

2nd Glorious Week

MAD-MAN

.... with —

N.S.Krishnan, T A Maduram

For Quality Printing

L. N. Press

Sriramp st, MYSORE

ಸತ್ಯವಾದಿ

ದಿನಪತ್ರಿಕೆ. ತಿಂಗಳಿಗೆ ಆರಾಣೆ

ವಾರ್ಷಿಕ ಚಂದ ಪಂಕ್ತಿಳಕ್ಕೆ

ಅಂಚೆವೆಚ್ಚ ಸೇರಿ ರೂ. 9

ಸೋವಿವಾರದ ಸಂಚಿಕೆ ಮಾತ್ರ

ವಾರ್ಷಿಕಚಂದಾ

ಪಂಕ್ತಿಳಕ್ಕೆ ಅಂಚೆವೆಚ್ಚ ಸೇರಿ 1–12–0

Save the Cow

ಗೋ ವಧೆ ನಿಲ್ಲಲಿ

Edited, Printed and Publishe dby M. S Krishna Rao at the Satyavadi Press Chamaarja Agahar Myrsore.

ಗ್ರೈಪ್ ಸಿರಪ್

ಟ್ರೇಡ್ ITL ಮಾರ್ಕ್

ಎಳೆಯ ಮಕ್ಕಳ ಜೀರ್ಣಶಕ್ತಿಯನ್ನು ಬಲಪಡಿಸುವ ಷರಬತ್ತು. ಗ್ರೈಪ್ ಸಿರಪ್ ರುಚಿ ಸಹಿಯಾಗಿಯೂ ಮತ್ತು ಆಹ್ಲಾದ ಉಂಟುಮಾಡುವುದಾಗಿಯೂ ಇರುವುದರಿಂದ ಮಕ್ಕಳ ಸೇವನೆಗೆ ಅನುಕೂಲವಾದುದು.

ಪ್ರತಿಯೊಬ್ಬ ತಾಯಿಯೂ ಮನೆಯಲ್ಲಿ ಈ ಷರಬತ್ತಿನ ಸೀಸೆ ಒಂದನ್ನು ಯಾವಾಗಲೂ ಕೈಗಾವಲಾಗಿಟ್ಟಿರುವುದು ಅತ್ಯವಶ್ಯಕ

ಎಲ್ಲಾ ಪ್ರಮುಖ ಔಷಧಿವ್ಯಾಪಾರಿಗಳಲ್ಲಿಯೂ ಸುಲಭ ಬೆಲೆಗೆ ದೊರೆಯುವುದು.

— ತಯಾರಿಕರು —

The Mysore Industrial & Testing Laboratory Ltd..

Malleswaram P. O. Bangalore

ಶ್ರೀ 'ಓಂ' ಗುರುತಿನ

ಅರಿಸಿದ ಪರಿಶುದ್ಧ ಕೇಸರಿ

ಈ ಶ್ರೀ ಓಂ ಗುರುತಿನ ಕೇಸರಿಯು ಗ್ಯಾರಂಟಿಯಾಗಿ ಪರಿಶುದ್ಧವಾದುದು. ಸ್ಪೇನ್ ದೇಶದಲ್ಲಿಯು ಕೇಸರಿ ಗಿಡಗಳಿಂದ ಅರಿಸಲ್ಪಟ್ಟ ಹೂಗಳಿಂದ ಕಿತ್ತಲ್ಪಟ್ಟು ಅರಿಸ ತೆಗೆಯಲ್ಪಟ್ಟಿದಾಗಿದೆ. ಇದರಲ್ಲಿ ಏನೆಂದು ಆಕ್ಷೇಪಣೀಯ ಪದಾರ್ಥವೂ ಸೇರಿಲ್ಲ ಮತ್ತು ಧಾರ್ಮಿಕವಾಗಿಯೂ ಪರಿಶುದ್ಧವಾದುದು. ದೇವಾಲಯಗಳಲ್ಲಿಯೂ ದೇವರ ಪೂಜೆಗೂ ಮತ್ತು ಚಾರ ಸಮಾರಂಭಗಳಲ್ಲಿಯೂ ಎಲ್ಲ ಸಂತೋಷ ಮತ್ತು ಸಾಂಘಿಕ ಕೂಟಗಳಲ್ಲಿಯೂ ಉಪಯೋಗಿಸಲ್ಪಡತಕ್ಕದ್ದಾಗಿದೆ. ಎಂದು ಶಿಪಾರಸು ಮಾಡಲ್ಪಟ್ಟಿದೆ

ವಲ್ಲಭದಾಸ್ ತೇಜ್‌ಪಾಲ್

(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)

ಗೋವಿಂದಪ್ಪ ನಾಯಕ್ ರಸ್ತೆ, ಜಿ. ಟಿ. ಮದರಾಸು

SHAKTI SUDHA

A Superb TONIC